**ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ**
**ಮಹಾನಗರ ಆಯುಕ್ತರವರ ಕಛೇರಿ, ನಂ. 1, ಅಲಿ ಅಸ್ಕರ್ ರಸ್ತೆ, ಬೆಂಗಳೂರು - 560 052.**

**ಪ್ರಕಟಣೆ**

**ಸಂಖ್ಯೆ: ಬಿಎಂಆರ್‌ಡಿಎ/ TP/ STR-PLAN/18/ 2007-08, ದಿನಾಂಕ : 09.03.2011**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1985ರ ಕಲಂ, 9ರಡಿಯಲ್ಲಿ ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯ ಕರಡು ಪರಿಷ್ಕೃತ ರಚನಾ ನಕ್ಷೆ - 2031ಕ್ಕೆ ಸರ್ಕಾರದ ಆದೇಶ ಸಂಖ್ಯೆ : ನಅಇ/204/ ಬಿಎಂಆರ್/ 2010 ಬೆಂಗಳೂರು ದಿನಾಂಕ : 24.02.2011ರಲ್ಲಿ ಸರ್ಕಾರವು ಮಂಜೂರಾತಿಯನ್ನು ನೀಡಿರುತ್ತದೆ. ಸದರಿ ಕರಡು ಯೋಜನೆಯ ನಕ್ಷೆಗಳು ಮತ್ತು ವರದಿಯು ಸಾರ್ವಜನಿಕರ ಮಾಹಿತಿಗಾಗಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಸಾರ್ವಜನಿಕರ ವೀಕ್ಷಣೆಗಾಗಿ ಲಭ್ಯವಿರುತ್ತವೆ. ಈ ಯೋಜನೆಯ ಕುರಿತು ಸಾರ್ವಜನಿಕರು ತಮ್ಮ ಸಲಹೆ/ಆಕ್ಷೇಪಣೆಗಳನ್ನು ಈ ಪ್ರಕಟಣೆಯು ಪ್ರಚುರಗೊಂಡ ದಿನದಿಂದ 30 ದಿನಗಳ ಅವಧಿಯೊಳಗಾಗಿ ( ಪ್ರಕಟಣೆಯ ದಿನಾಂಕ ಸೇರಿದಂತೆ) ಖುದ್ದಾಗಿ ಅಥವಾ ಅಂಚೆ ಮೂಲಕ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಕಛೇರಿಗೆ ತಲುಪಿಸತಕ್ಕದ್ದು. ಅವಧಿ ಮುಗಿದ ನಂತರ ಬರುವ ಸಲಹೆ/ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಅಪರ ಮುಖ್ಯ ಕಾರ್ಯದರ್ಶಿಗಳು
ಹಾಗೂ ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ
ಪ್ರಾಧಿಕಾರ, ಬೆಂಗಳೂರು.